# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 10/2024

ಡಬ್ಲ್ಯೂ ಡಬ್ಲ್ಯೂ–1

**<u>ದಿನಾಂಕ 18.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು ಕೆಲಸ ಮಾಡುತ್ತಿದ ಸಂಸ್ಥೆಗೆ ಮಳೆ ನೀರು ನುಗ್ಗಿ ಸಂಸ್ಥೆ ನಡೆಸಲು ಸಾಧ್ಯವಾಗದಷ್ಟು ತೊಂದರೆ ಉಂಟಾಗಿತ್ತು ಎಂದರೆ ಸರಿಯಲ್ಲ. ಈ ಸಮಯದಲ್ಲಿ ಆಡಳಿತ ವರ್ಗದವರು ಕೆಲಸ ಗಾರರನ್ನು ಕರೆದು ಈ ಸ್ಥಿತಿಯಲ್ಲಿ ಸಂಸ್ಥೆಯನ್ನು ನಡೆಸಲು ಸಾಧ್ಯವಿಲ್ಲವಾದ್ದರಿಂದ ಬೆಂಗಳೂರಿಗೆ ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ಎಲ್ಲ ಕೆಲಸಗಾರರನ್ನು ಆಡಳಿತ ವರ್ಗದವರು ಕರೆದು ಬೆಂಗಳೂರಿಗೆ ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದಾಗ ನಾವು ಅಲ್ಲಿಗೆ ಹೋಗಲು ನಿರಾಕರಿಸಿದ್ದೆವು ಎಂದರೆ ಸರಿಯಲ್ಲ. ಆಡಳಿತ ವರ್ಗದವರು ಬೆಂಗಳೂರಿಗೆ ಹೋಗಿ ಕೆಲಸ ಮಾಡಲು ಹೇಳಿದಾಗ ಅದಕ್ಕೆ ನಾವು ಒಪ್ಪದೇ ಕಾರ್ಮಿಕ ಅಧಿಕಾರಿಗಳ ಮುಂದೆ ಬೋನಸ್ ನೀಡಿಲ್ಲ ಹಾಗೂ 3 ತಿಂಗಳ ವೇತನ ನೀಡಿಲ್ಲ ಎಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ಒಟ್ಟಿಗೆ ಕೆಲಸ ಕೊಡಿಸಿ ಎಂದು ಕೇಳಿದ್ದೆವು ಎನ್ನುತ್ತಾರೆ. ನಾವು ಕಾರ್ಮಿಕ ಅಧಿಕಾರಿಗಳ ಮುಂದೆ ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುಬಲ್ಲೆ. ಕಾರ್ಮಿಕ ಅಧಿಕಾರಿಗಳ ಮುಂದೆ ಪರಕರಣ ಇತ್ಯರ್ಥವಾಗದೇ ಇದ್ದುದ್ದರಿಂದ ಈ ನ್ಯಾಯಾಲಯಕ್ಕೆ ವರ್ಗಾವಣೆ ಆಯಿತು ಎಂದರೆ ಸರಿ.

ಈ ನ್ಯಾಯಾಲಯಕ್ಕೆ ಪ್ರಕರಣ ವರ್ಗಾವಣೆ ಆದ ನಂತರ ನಾನು ಈ ನ್ಯಾಯಾಲಯದಲ್ಲಿ ಕ್ಲೇಮ್ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಕ್ಲೇಮ್ ಅರ್ಜಿಯಲ್ಲಿ 15 ಜನ ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ 15 ಜನ ಎಲ್ಲ ದಿನಾಂಕಗಳಲ್ಲೂ ನ್ಯಾಯಾಲಯದ ಮುಂದೆ ಬಂದಿಲ್ಲ. ನಾನು ನನ್ನ ಕ್ಲೇಮ್ ಅರ್ಜಿಯಲ್ಲಿ ತಿಳಿಸಿರುವಂತೆ 50 ಜನ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 15 ಜನ ಅಲ್ಲದೇ 5–6 ಜನ ಕಾರ್ಮಿಕರು ಬೆಂಗಳೂರಿನ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ 3 ಜನರನ್ನು ಕರೆದುಕೊಂಡು ಹೋಗಿರುತ್ತಾರೆ. ಆಡಳಿತ ವರ್ಗದವರು ಕಾರ್ಮಿಕರು ಕೆಲಸ ಮಾಡಿದ ಅವಧಿಗೆ ಸಂಬಳ

ನೀಡಿರುತ್ತಾರೆ ಎಂದರೆ ಕೊನೆಯ ಮೂರು ತಿಂಗಳು ಸಂಬಳವನ್ನು ಸರಿಯಾಗಿ ಕೊಟ್ಟಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪೂರ್ತಿ ಸಂಬಳ ಯಾರಿಗೂ ಕೊಟ್ಟಿಲ್ಲ ಸ್ವಲ್ಪ ಸ್ವಲ್ಪ ಕೊಟ್ಟಿರುತ್ತಾರೆ.

ಉಲ್ಲೇಖದ ಆದೇಶದಲ್ಲಿ ಯಾರಾರಿಗೆ ಯಾವಾವ ತಿಂಗಳಿನಲ್ಲಿ ಎಷ್ಟೇಷ್ಟು ಸಂಬಳ ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿಲ್ಲ ಎಂದರೆ ಸರಿ. ಆಡಳಿತ ವರ್ಗದವರು ಮಳೆ ಬಂದು ಕಾರ್ಖಾನೆಯನ್ನು ಮುಚ್ಚುವ ಸಮಯದವರೆಗೆ ನಮಗೆ ಸಂಬಳ ನೀಡಿ ಇ.ಎಸ್.ಐ. ಹಾಗೂ ಪಿ.ಎಫ್.ಕೂಡ ಕಟ್ಟಿರುತ್ತಾರೆ ಎಂದರೆ ಸರಿ. ಈಗ ನನ್ನನ್ನು ಬೆಂಗಳೂರಿನಲ್ಲಿ ಕೆಲಸಕ್ಕೆ ತೆಗೆದು ಕೊಂಡರೆ ಹೋಗಲು ಸಿದ್ದರಿರುತ್ತೀರಾ ಎಂದರೆ ತೀರ್ಮಾನ ಮಾಡಿ ಹೇಳುತ್ತೇನೆ. ಸಾಕ್ಷಿ ಮುಂದುವರೆದು ಈಗ ನನಗೆ ಇರುವ ಪರಿಸ್ಥಿತಿಯಲ್ಲಿ ನಾನು ಬೆಂಗಳೂರಿಗೆ ಹೋಗಿ ಕೆಲಸ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಈಗ ನಾವೆಲ್ಲರೂ ಜಮೀನಿನ ಕೆಲಸವನ್ನು ಮಾಡಿಸುತ್ತಿದ್ದೇವೆ.

ಇ.ಎಸ್.ಐ. ಮತ್ತು ಪಿ.ಎಫ್. ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಬಲ್ಲೆ. ಸಾಕ್ಷಿ ಮುಂದುವರೆದು ಇ.ಎಸ್.ಐ. ದಾಖಲೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಪಿ.ಎಫ್. ದಾಖಲೆಯನ್ನು ಕೊಡಬಲ್ಲೆ. ಆಡಳಿತ ವರ್ಗದವರು ಮೈಸೂರಿನಲ್ಲಿ ನನ್ನ ಕೆಲಸ ನಿರಾಕರಣೆ ಮಾಡಿಲ್ಲ, ಜೋರಾಗಿ ಮಳೆ ಬಂದಿದ್ದ ಕಾರಣ ಅವರು ಸಂಸ್ಥೆಯನ್ನು ನಡೆಸಲಾರದಷ್ಟು ಸಮಸ್ಯೆ ಉಂಟಾಗಿತ್ತು ಎಂದರೆ ಸರಿಯಲ್ಲ. ಸತ್ಯದ ವಿಷಯವನ್ನು ಮುಚ್ಚಿಟ್ಟು ಸಂಸ್ಥೆಯಿಂದ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಈ ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**

# <u>ಕಾರ್ಮಿಕ ನ್ಯಾಯಾಲಯ, ಮೈಸೂರು.</u>

**Ref**: 10/2024

ಡಬ್ಲ್ಯೂ ಡಬ್ಲ್ಯೂ-2

**<u>ದಿನಾಂಕ 18.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು</u>**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು ಕೆಲಸ ಮಾಡುತ್ತಿದ ಸಂಸ್ಥೆಗೆ ಮಳೆ ನೀರು ನುಗ್ಗಿ ಸಂಸ್ಥೆ ನಡೆಸಲು ಸಾಧ್ಯವಾಗದಷ್ಟು ತೊಂದರೆ ಉಂಟಾಗಿತ್ತು ಎಂದರೆ ಸರಿಯಲ್ಲ. ಈ ಸಮಯದಲ್ಲಿ ಆಡಳಿತ ವರ್ಗದವರು ಕೆಲಸ ಗಾರರನ್ನು ಕರೆದು ಈ ಸ್ಥಿತಿಯಲ್ಲಿ ಸಂಸ್ಥೆಯನ್ನು ನಡೆಸಲು ಸಾಧ್ಯವಿಲ್ಲವಾದ್ದರಿಂದ ಬೆಂಗಳೂರಿಗೆ ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಮ್ಮ ಎಲ್ಲ ಕೆಲಸಗಾರರನ್ನು ಆಡಳಿತ ವರ್ಗದವರು ಕರೆದು ಬೆಂಗಳೂರಿಗೆ ವರ್ಗಾವಣೆ ಮಾಡುತ್ತೇವೆ ಎಂದು ಹೇಳಿದಾಗ ನಾವು ಅಲ್ಲಿಗೆ ಹೋಗಲು ನಿರಾಕರಿಸಿದ್ದೆವು ಎಂದರೆ ಸರಿಯಲ್ಲ. ಆಡಳಿತ ವರ್ಗದವರು ಬೆಂಗಳೂರಿಗೆ ಹೋಗಿ ಕೆಲಸ ಮಾಡಲು ಹೇಳಿದಾಗ ಅದಕ್ಕೆ ನಾವು ಒಪ್ಪದೇ ಕಾರ್ಮಿಕ ಅಧಿಕಾರಿಗಳ ಮುಂದೆ ಬೋನಸ್ ನೀಡಿಲ್ಲ ಹಾಗೂ 3 ತಿಂಗಳ ವೇತನ ನೀಡಿಲ್ಲ ಎಂದು ಅರ್ಜಿ ಸಲ್ಲಿಸಿದ್ದೆವು ಎಂದರೆ ಒಟ್ಟಿಗೆ ಕೆಲಸ ಕೊಡಿಸಿ ಎಂದು ಕೇಳಿದ್ದೆವು ಎನ್ನುತ್ತಾರೆ. ನಾವು ಕಾರ್ಮಿಕ ಅಧಿಕಾರಿಗಳ ಮುಂದೆ ಸಲ್ಲಿಸಿದ್ದ ಅರ್ಜಿಯ ಪ್ರತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ಕಾರ್ಮಿಕ ಅಧಿಕಾರಿಗಳ ಮುಂದೆ ಪರಕರಣ ಇತ್ಯರ್ಥವಾಗದೇ ಇದ್ದುದ್ದರಿಂದ ಈ ನ್ಯಾಯಾಲಯಕ್ಕೆ ವರ್ಗಾವಣೆ ಆಯಿತು ಎಂದರೆ ಸರಿ.

ಈ ನ್ಯಾಯಾಲಯಕ್ಕೆ ಪ್ರಕರಣ ವರ್ಗಾವಣೆ ಆದ ನಂತರ ನಾನು ಈ ನ್ಯಾಯಾಲಯದಲ್ಲಿ ಕ್ಲೇಮ್ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಕ್ಲೇಮ್ ಅರ್ಜಿಯಲ್ಲಿ 15 ಜನ ಸಹಿ ಮಾಡಿದ್ದಾರೆ ಎಂದರೆ ಸರಿ. ಸದರಿ 15 ಜನ ಎಲ್ಲ ದಿನಾಂಕಗಳಲ್ಲೂ ನ್ಯಾಯಾಲಯದ ಮುಂದೆ ಬಂದಿಲ್ಲ. ನಾನು ನನ್ನ ಕ್ಲೇಮ್ ಅರ್ಜಿಯಲ್ಲಿ ತಿಳಿಸಿರುವಂತೆ 50 ಜನ ಅಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. 15 ಜನ ಅಲ್ಲದೇ 5-6 ಜನ ಕಾರ್ಮಿಕರು ಬೆಂಗಳೂರಿನ 2 ನೇ ಪಕ್ಷಗಾರರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ 3 ಜನರನ್ನು ಕರೆದುಕೊಂಡು ಹೋಗಿರುತ್ತಾರೆ. ಆಡಳಿತ ವರ್ಗದವರು ಕಾರ್ಮಿಕರು ಕೆಲಸ ಮಾಡಿದ ಅವಧಿಗೆ ಸಂಬಳ

ನೀಡಿರುತ್ತಾರೆ ಎಂದರೆ ಕೊನೆಯ ಮೂರು ತಿಂಗಳು ಸಂಬಳವನ್ನು ಸರಿಯಾಗಿ ಕೊಟ್ಟಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಪೂರ್ತಿ ಸಂಬಳ ಯಾರಿಗೂ ಕೊಟ್ಟಿಲ್ಲ ಸ್ವಲ್ಪ ಸ್ವಲ್ಪ ಕೊಟ್ಟಿರುತ್ತಾರೆ.

ಉಲ್ಲೇಖದ ಆದೇಶದಲ್ಲಿ ಯಾರಾರಿಗೆ ಯಾವಾವ ತಿಂಗಳಿನಲ್ಲಿ ಎಷ್ಟೇಷ್ಟು ಸಂಬಳ ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿಲ್ಲ ಎಂದರೆ ಸರಿ. ಆಡಳಿತ ವರ್ಗದವರು ಮಳೆ ಬಂದು ಕಾರ್ಖಾನೆಯನ್ನು ಮುಚ್ಚುವ ಸಮಯದವರೆಗೆ ನಮಗೆ ಸಂಬಳ ನೀಡಿ ಇ.ಎಸ್.ಐ. ಹಾಗೂ ಪಿ.ಎಫ್.ಕೂಡ ಕಟ್ಟಿರುತ್ತಾರೆ ಎಂದರೆ ಸರಿ. ಈಗ ನನ್ನನ್ನು ಬೆಂಗಳೂರಿನಲ್ಲಿ ಕೆಲಸಕ್ಕೆ ತೆಗೆದು ಕೊಂಡರೆ ಹೋಗಲು ಸಿದ್ದರಿರುತ್ತೀರಾ ಎಂದರೆ ತೀರ್ಮಾನ ಮಾಡಿ ಹೇಳುತ್ತೇನೆ. ಸಾಕ್ಷಿ ಮುಂದುವರೆದು ಈಗ ನನಗೆ ಇರುವ ಪರಿಸ್ಥಿತಿಯಲ್ಲಿ ನಾನು ಬೆಂಗಳೂರಿಗೆ ಹೋಗಿ ಕೆಲಸ ಮಾಡಲು ಆಗುವುದಿಲ್ಲ ಎನ್ನುತ್ತಾರೆ. ಈಗ ನಾವೆಲ್ಲರೂ ಜಮೀನಿನ ಕೆಲಸವನ್ನು ಮಾಡಿಸುತ್ತಿದ್ದೇವೆ.

ಇ.ಎಸ್.ಐ. ಮತ್ತು ಪಿ.ಎಫ್. ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಬಲ್ಲೆ. ಸಾಕ್ಷಿ ಮುಂದುವರೆದು ಇ.ಎಸ್.ಐ. ದಾಖಲೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ಪಿ.ಎಫ್. ದಾಖಲೆಯನ್ನು ಕೊಡಬಲ್ಲೆ. ಆಡಳಿತ ವರ್ಗದವರು ಮೈಸೂರಿನಲ್ಲಿ ನನ್ನ ಕೆಲಸ ನಿರಾಕರಣೆ ಮಾಡಿಲ್ಲ, ಜೋರಾಗಿ ಮಳೆ ಬಂದಿದ್ದ ಕಾರಣ ಅವರು ಸಂಸ್ಥೆಯನ್ನು ನಡೆಸಲಾರದಷ್ಟು ಸಮಸ್ಯೆ ಉಂಟಾಗಿತ್ತು ಎಂದರೆ ಸರಿಯಲ್ಲ. ಸತ್ಯದ ವಿಷಯವನ್ನು ಮುಚ್ಚಿಟ್ಟು ಸಂಸ್ಥೆಯಿಂದ ಹೆಚ್ಚಿನ ಹಣ ಪಡೆಯುವ ದುರುದ್ದೇಶದಿಂದ ಈ ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.) (ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**